INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,11-17
Peer Reviewed Journal, Referred Journal

# ಕಂದೇಗಾಲ ಗ್ರಾಮದಲ್ಲಿ ದೊರೆತ ಸ್ಮಾರಕ ಶಿಲ್ಪಗಳು

ಡಾ.ಬಿ.ಸಿ.ಸುರೇಶ.[1]

ಗುಂಡ್ಲುಪೇಟೆ ತಾಲೂಕಿನಲ್ಲಿ ಕಂಡುಬರುವ ಈ ಗ್ರಾಮವು ಕಬ್ಬಹಳ್ಳಿಯಿಂದ ಪೂರ್ವಕ್ಕೆ ಸು. ೮.ಕಿ.ಮೀ. ದೂರದಲ್ಲಿದೆ. ಇದು ಈ ಭಾಗದ ಪ್ರಮುಖ ಪುಣ್ಯಕ್ಷೇತ್ರವಾದ ಸ್ಕಂದಗಿರಿ ಎಂದೆ ಪ್ರಸಿದ್ಧಿಯಾಗಿರುವ ಪಾರ್ವತಿ ಬೆಟ್ಟದ ತಳದಲ್ಲಿದೆ. ಸ್ಥಳೀಯ ಐತಿಹ್ಯದ ಪ್ರಕಾರ ಕಾರ್ತಿಕೇಯನು ಇಲ್ಲಿ ಯುದ್ಧ ಮಾಡಿ ತಾರಕಾಸುರನನ್ನು ಸಂಹರಿಸಿ ವಿಜಯಿಯಾಗಿರುವುದು ಹಾಗೂ ಶಿವನನ್ನು ಕುರಿತು ತಪಸ್ಸು ಮಾಡಿದುದಾಗಿ ಪ್ರತೀತಿ. ಆದುದರಿಂದ ಸ್ಕಂದ ಎನ್ನುವ ಪದದ ತದ್ರೂಪಾಗಿ ಕಂದ ಎಂಬುದಾಗಿ ಕಂದೇಗಾಲ ಎಂಬ ಹೆಸರು ಬಂದಿದೆ ಎನ್ನುತ್ತಾರೆ. ಕ್ರಿ.ಶ. 12ನೇ ಶತಮಾನದ ಹೊಯ್ಸಳರ ಕಾಲದ ಶಾಸನದಲ್ಲಿ ‘ಕಂದಮಂಗಲಂ’ ಅಲಿಯಾಸ್ ‘ತೆನ್ನಣಯ’ ಎಂದು ಉಲ್ಲೇಖಿಸುತ್ತದೆ. ಈ ಗ್ರಾಮಕ್ಕೆ ಹೋಗುವ ಮಾರ್ಗದ ಮುಖ್ಯರಸ್ತೆಯ ಬದಿಯಲ್ಲಿ ಒಂದೆ ಸ್ಥಳದಲ್ಲಿ ಎಂಟು ಸ್ಮಾಕರ ಶಿಲ್ಪಗಳಾದ ವೀರಗಲ್ಲುಗಳು, ವೀರಮಾಸ್ತಿಗಲ್ಲುಗಳು ಕಂಡುಬಂದಿವೆ.

**1.ವೀರಗಲ್ಲು:**

ಇದು ಸುಮಾರು ೩ ಅಡಿ ಎತ್ತರ ಮತ್ತು ೨ ಅಡಿ ಅಗಲ ಮತ್ತು ೬ ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರ ಪುರುಷರಿದ್ದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಬಿಲ್ಲು, ಬಾಣ, ಈಟಿ ಮತ್ತು ಭರ್ಜಿಯನ್ನು ಹಿಡಿದು ಹೋರಾಡುತ್ತಿರುವ ದೃಶ್ಯ ಈತನ ಹಿಂಭಾಗದಲ್ಲಿ ದಂಪತಿಗಳಿಬ್ಬರು ಮತ್ತು ಒಂದು ಮಗು ನಿಂತಿರುವುದು ಕಂಡುಬರುತ್ತದೆ. ಬಹುಶ: ಇಲ್ಲಿ ಕುಟುಂಬದ ಹಿರಿಯ ಸದಸ್ಯನೊಬ್ಬ ತನ್ನ ಕುಟುಂಬವನ್ನು ರಕ್ಷಿಸಿಕೊಳ್ಳಲು ದುಷ್ಟರೊಡನೆ ಸೆಣಸಾಟಕ್ಕೆ ಇಳಿದು ಹೋರಾಡಿ ಮರಣ ಹೊಂದಿರಬಹುದು. ಎರಡನೇ ಪಟ್ಟಿಕೆಯಲ್ಲಿ ಚಾಮರಧಾರಿಣಿ ದೇವ ಕನ್ಯೆಯರು ಯುದ್ಧದಲ್ಲಿ ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು, ಹಿಂಭಾಗದಲ್ಲಿ ನಂದಿಯ ಶಿಲ್ಪ, ಜೊತೆಗೆ ಸೂರ್ಯ, ಚಂದ್ರರ ಉಬ್ಬು ಶಿಲ್ಪಗಳಿರುವುದನ್ನು ಕಾಣಬಹುದು.

---

[1]. ಇತಿಹಾಸ ಸಹಾಯಕ ಪ್ರಾಧ್ಯಾಪಕ, ಶ್ರೀ.ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು

**2. ಇಕ್ಕೈ ಮಾಸ್ತಿಕಲ್ಲು:**

ಇದು ಸುಮಾರು 3 ಅಡಿ ಎತ್ತರ ಮತ್ತು 2 ಅಡಿ ಅಗಲ ಮತ್ತು 6 ಇಂಚು ದಪ್ಪನಾಗಿದ್ದು ಇದು ಒಂದು ಪಟ್ಟಿಕೆಯನ್ನು ಹೊಂದಿದ್ದು, ಇಬ್ಬರು ವೀರ ವನಿತೆಯರು ತಮ್ಮ ಬಲ ಮತ್ತು ಎಡಗೈಯನ್ನು ಮೇಲಕ್ಕೆತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ವೀರ ವನಿತೆಯರು ಸರ್ವ ಅಲಂಕಾರ ಭೂಷಿತರಾಗಿ ಅಂದರೆ ಸುಂದರವಾದ ವಸ್ತ್ರಾಭರಣಗಳ ಅಲಂಕಾರಗಳಿಂದ ಕೂಡಿರುವ ಕೇಶಾಲಂಕಾರದಲ್ಲಿ ಕಿರೀಟ ಧಾರಣೆ ಮಾಡಿರುವ ತೋಳುಗಳಿಗೆ ತೋಳಬಂದಿ, ಕೈಕಡಗ, ಮುಂಗೈನಲ್ಲಿ ಬಳೆಗಳನ್ನು ಧರಿಸಿದ್ದು, ಆಕೆಯ ಬೆರಳುಗಳನ್ನು ಸ್ಪುಟವಾಗಿ ಕೆತ್ತಲಾಗಿದೆ. ಕಿವಿಗಳಿಗೆ ಓಲೆ ಕೊರಳಿಗೆ ಆಭರಣ ಧರಿಸಿದ್ದು, ಇಬ್ಬರು ಮಹಾಸತಿಯರು ತಮ್ಮ ಎಡಗೈಯಲ್ಲಿ ಘಂಟೆಯನ್ನು ಹಿಡಿದಿದ್ದು ಕತ್ತಿನಲ್ಲಿ ಇಳಬಿಟ್ಟ ಕಂಠೀಹಾರವಿದೆ. ಹಾಗೂ ವಸ್ತ್ರವನ್ನು ಧರಿಸಿರುವುದು ಬಹಳ ಸುಂದರವಾಗಿ ಕಾಣುವಂತೆ ಶಿಲ್ಪಿಯು ಚಿತ್ರಿಸಿದ್ದಾನೆ. ಮುಂಗೈಯಲ್ಲಿ ಬಳೆಗಳನ್ನು ತೋಳಿನಲ್ಲಿ ತೋಳುಬಂದಿಯನ್ನು ಕೆತ್ತಲಾಗಿದೆ. ಕೊರಳಲ್ಲಿ ತುಂಬಾ ವಿವಿಧ ರೀತಿಯ ಹಾರಗಳಿವೆ. ಕಿವಿಯ ಕರ್ಣಕುಂಡಲವು ಚಪ್ಪಟೆಯಂತಿದೆ. ಇಲ್ಲಿ ವೀರನು ನಿಂತಿರುವ ಭಂಗಿಯು ಬಹಳ ವೈಶಿಷ್ಟ್ಯಪೂರ್ಣವಾಗಿದೆ. ವೀರರ ಎರಡು ಕಾಲಿನ ಮಧ್ಯಭಾಗದಲ್ಲಿ ಹೂವನ್ನು ಚಿತ್ರಿಸಲಾಗಿದೆ. ಸಹಗಮನವಾಗುವಾಗ ಅವಳಿಗೆ ರಾಜ್ಯದ ರಾಜರು ಅಥವಾ ಆಡಳಿತ ಅಧಿಕಾರಿಗಳು ಅರಿಶಿನ, ಕುಂಕುಮ, ತಾಂಬೂಲ, ಛತ್ರಿ, ನಿಂಬೆಹಣ್ಣು, ಕಳಸ, ಹೂವು ಮುಂತಾದವುಗಳನ್ನು ಕೊಡುತ್ತಿದ್ದ ಪದ್ಧತಿ ಇದ್ದಿತು. ಬಲ ಭಾಗದಲ್ಲಿ ಕತ್ತಿಯನ್ನು ಇಟ್ಟಿರುವುದನ್ನು ಕಾಣಬಹುದು. ಈ ಇಬ್ಬರು ಮಾಸ್ತೆಯರು ವೀರ ಪತಿಯು ಯುದ್ಧಕ್ಕೆ ಹೋರಟಂತಹ ಸಂದರ್ಭದಲ್ಲಿ ತಮ್ಮ ಬಲಗೈಯನ್ನು ಮೇಲಕ್ಕೆತ್ತಿ ಶುಭ ಹಾರೈಸುತ್ತಿರುವಂತಹ ಸನ್ನಿವೇಶ ಎಂದು ಹೇಳಬಹುದು. ಇನ್ನೊಂದು ಅಂಶವೆನೆಂದರೆ ವೀರನು ಮಾಡಿದಾಗ ಆತನ ಇಬ್ಬರು ಪತ್ನಿಯರು ಸಹಗಮನವಾಗಿದ್ದರೆ ಎರಡು ಕೈಗಳನ್ನು ಕೆತ್ತಿರುತ್ತಾರೆ. ಇವುಗಳಿಗೆ ಇಕ್ಕೈ ಮಾಸ್ತಿಕಲ್ಲು ಎಂದು ಹೇಳಬಹುದಾಗಿದೆ. ಒಟ್ಟಾರೆಯಾಗಿ ಈ ಗ್ರಾಮದ ವೀರ ಮಾಸ್ತಿಗಳನ್ನು ಗಮನಿಸಿದಾಗ ಇವು ಏಕ ಪಟ್ಟಿಕೆಯನ್ನು ಹೊಂದಿರುವುದರಿಂದ 16–17ನೇ ಶತಮಾನಕ್ಕೆ ಸೇರಿದ ವಿಜಯನಗರದ ಅರಸರ ಕಾಲಘಟ್ಟದ್ದಾಗಿರಬಹುದೆಂದು ಊಹಿಸಬಹುದಾಗಿದೆ.

**3.ವೀರಗಲ್ಲು:**

ಈ ವೀರಗಲ್ಲು ಸುಮಾರು 3 ಅಡಿ ಎತ್ತರ ಮತ್ತು 2 ಅಡಿ ಅಗಲ ಮತ್ತು 6 ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರ ಪುರುಷರಿದ್ದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಬಿಲ್ಲು, ಬಾಣ, ಈಟಿ ಮತ್ತು ಭರ್ಜಿಯನ್ನು ಹಿಡಿದು ಹೋರಾಡುತ್ತಿರುವ ದೃಶ್ಯ ಎರಡನೇ ಪಟ್ಟಿಕೆಯಲ್ಲಿ ಸ್ವರ್ಗಾನೆಯರು ಯುದ್ಧದಲ್ಲಿ ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಮಧ್ಯಭಾಗದಲ್ಲಿ ಶಿವಲಿಂಗವಿದ್ದು,

ಎಡಭಾಗದಲ್ಲಿ ಕುಳಿತಿರುವ ನಂದಿಯ ಶಿಲ್ಪ ಬಲಭಾಗದಲ್ಲಿ ಯತಿಯು ಪೂಜೆ ಸಲ್ಲಿಸುತ್ತಿರುವುದನ್ನು ಕಾಣಬಹುದು. ಈತನ ಹಿಂಭಾಗದಲ್ಲಿ ಭಕ್ತನು ಕೈಮುಗಿದು ಕುಳಿತಿರುವುದನ್ನು, ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಉಬ್ಬು ಶಿಲ್ಪದ ಕೆತ್ತನೆಯನ್ನು ಕಾಣಬಹುದಾಗಿದೆ.

**4.ಸ್ಮಾರಕ ಶಿಲ್ಪ:**

ಇದು ಸುಮಾರು 2 ಅಡಿ ಅಗಲ ಹಾಗೂ 3 ಅಡಿ ಎತ್ತರದ ಶಿಲ್ಪವಾಗಿದೆ. ಈ ಶಿಲ್ಪವು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು ಯೋಧರನ್ನು ಸುಂದರವಾಗಿ ಕೆತ್ತಲಾಗಿದೆ. ಇದರಿಂದ ವೀರನು ಸ್ಥಳೀಯ ಪ್ರಾಂತ್ಯದವನೇ ಇರಬಹುದು ಎಂದು ಹೇಳಿದರೆ ತಪ್ಪಾಗಲಾರದು. ಈತನು ಒಬ್ಬ ಜಟ್ಟಿಯ ರೀತಿಯಲ್ಲಿ ಪಂಚೆಯನ್ನು (ವಸ್ತ್ರ) ಮೇಲೆ ಎತ್ತಿದಂತೆ ಅಂದರೆ ಕಚ್ಚೆಯಂತೆ ಕಟ್ಟಿರುವುದು ಚಿತ್ರದಲ್ಲಿ ಸುಂದರವಾಗಿ ಮೂಡಿ ಬಂದಿದೆ ಹಾಗೂ ಈತನು ಕಂಠದಲ್ಲಿ ಮಣಿಹಾರಗಳನ್ನು ಸರಮಾಲೆಯಾಗಿ ಧರಿಸಿರುತ್ತಾನೆ ಮತ್ತು ಕೈಗಳಿಗೆ ತೋಳುಬಂದಿಯನ್ನು ಧರಿಸಿದ್ದು ಹಾಗೂ ತುಂಬಿದ ಅಗಲವಾದ ದಪ್ಪನೆಯ ಮುಖ ಹೊಂದಿದ್ದು ದಪ್ಪನೆಯ ಮೀಸೆ ಸುಂದರವಾದ ಆಕರ್ಷಕ ಕಣ್ಣುಗಳು ಸೊಗಸಾಗಿ ಈ ಶಿಲ್ಪ ಕಲೆಯಲ್ಲಿ ಮೂಡಿಬಂದಿರುವುದನ್ನು ಕಾಣಬಹುದಾಗಿದೆ. ಈತನು ಕಂಠದಲ್ಲಿ ವಿಶೇಷವಾದ ಕಂಠಾಭರಣಗಳನ್ನು ಧರಿಸಿದ್ದಾನೆ. ಈತನು ಎರಡು ಕೈಗಳಲ್ಲಿಯೂ ಆಯುಧವನ್ನು ಹಿಡಿದಿದ್ದಾನೆ. ಇದರಿಂದ ಈ ಶಿಲ್ಪ ಕಲೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಯುದ್ಧದಲ್ಲಿ ಹೋರಾಡಿದ ದೃಶ್ಯದಂತೆ ಮೂಡಿಬಂದಿದೆ ಎಂದು ಹೇಳಬಹುದು. ಮಹಿಷಮಂಡಲ ಪ್ರಾಂತ್ಯದಲ್ಲಿ ತಲಕಾಡಿನ ಗಂಗರು, ವಿಜಯನಗರದ ಅರಸರು ಇನ್ನಿತರ ಸ್ಥಳೀಯ ಅರಸರು ಆಳ್ವಿಕೆ ಮಾಡಿದ ಈ ಪ್ರಾಂತ್ಯದಲ್ಲಿ ವೈವಿಧ್ಯಮಯವಾದ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ. ಈ ಹಿನ್ನೆಲೆಯಿಂದ ಈ ಶಿಲ್ಪವನ್ನು ಗಮನಿಸಿದಾಗ ಒಂದು ದೃಷ್ಟಿಯಲ್ಲಿ ಸ್ಮಾರಕ ಶಿಲ್ಪವಾದರೂ ಮತ್ತೊಂದು ಕಡೆ ವೀರ ಯೋಧನ ಶಿಲ್ಪವೆಂದು ಪರಿಗಣಿಸಬಹುದಾಗಿದೆ.

**5.ವೀರಗಲ್ಲು**

ಈ ವೀರಗಲ್ಲು ಸುಮಾರು 4 ಅಡಿ ಎತ್ತರ ಮತ್ತು 3 ಅಡಿ ಅಗಲ ಮತ್ತು 6 ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಮೊದಲನೆ ಪಟ್ಟಿಕೆಯಲಿ ಇಬ್ಬರು ದಂಪತಿಗಳು ಮತ್ತು ಒಂದು ಮಗು ನಿಂತಿರುವುದು ಕಂಡುಬರುತ್ತದೆ. ಬಹುಶ: ಇಲ್ಲಿ ಕುಟುಂಬದ ಹಿರಿಯ ಸದಸ್ಯನೊಬ್ಬ ತನ್ನ ಕುಟುಂಬವನ್ನು ರಕ್ಷಿಸಿಕೊಳ್ಳಲು ದುಷ್ಟರೊಡನೆ ಸೆಣಸಾಟಕ್ಕೆ ಇಳಿದು ಹೋರಾಡಿ ಮರಣಹೊಂದಿರಬಹುದು. ಎರಡನೇ ಪಟ್ಟಿಕೆಯಲ್ಲಿ ಚಾಮರಧಾರಿಣಿ ದೇವ ಕನ್ಯೆಯರು ಯುದ್ಧದಲ್ಲಿ ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಮಧ್ಯಭಾಗದಲ್ಲಿ ಶಿವಲಿಂಗವಿದ್ದು, ಎಡಭಾಗದಲ್ಲಿ ಕುಳಿತಿರುವ ನಂದಿಯ ಶಿಲ್ಪ ಬಲಭಾಗದಲ್ಲಿ ಯತಿಯು ಪೂಜೆ

ಸಲ್ಲಿಸುತ್ತಿರುವುದನ್ನು ಕಾಣಬಹುದು. ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಉಬ್ಬು ಶಿಲ್ಪದ ಕೆತ್ತನೆಯನ್ನು ಕಾಣಬಹುದಾಗಿದೆ.

6. **ವೀರಗಲ್ಲು**:

ಈ ವೀರಗಲ್ಲು ಸುಮಾರು 5 ಅಡಿ ಎತ್ತರ, 4 ಅಡಿ ಅಗಲವಿದ್ದು 5 ಇಂಚು ದಪ್ಪದಾಗಿದ್ದು, ಗ್ರಾನೈಟ್ ಶಿಲೆಯದ್ದಾಗಿದ್ದು, ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ.ಮೊದಲನೇ ಪಟ್ಟಿಕೆಯಲ್ಲಿ 8 ಮಂದಿ ವೀರರು ವಿವಿದ ರೀತಿಯ ಆಯುಧಗಳನ್ನು ಹಿಡಿದಿದ್ದಾರೆ. ಇಬ್ಬರು ಕತ್ತಿ, ಗುರಾಣಿ, ಹಿಡಿದಿದ್ದಾರೆ ನಾಲ್ಕು ಜನರು ಖಡ್ಗವನ್ನು ಹಿಡಿದಿದ್ದಾರೆ. ಇಬ್ಬರು ಬಿಲ್ಲು ಬಾಣ ಪ್ರಯೋಗ ಮಾಡುತ್ತಿರುವಂತಹ ಚಿತ್ರಣವನ್ನು ಕಾಣಬಹುದು. ಈ ವೀರರು ವಸ್ತ್ರಾದಾರಿಯಾಗಿ ಸೊಂಟದಲ್ಲಿ ಪಂಚೆಯನ್ನು ಕಚ್ಚೆಯ ರೀತಿಯಲ್ಲಿ ಕಟ್ಟಿದ್ದು, ಕೈ ಕಡಗ, ಕರ್ಣಕುಂಡಲ ಹಾಗು ಕೇಶವನ್ನು ಉರುಳೆಯ ರೀತಿಯಲ್ಲಿ ಕಟ್ಟಿದ್ದು ದಪ್ಪದಾದ ಮೀಸೆಯನ್ನು ಹೊಂದಿದ್ದ ರಾಜರ ರೀತಿಯ ಅಲಂಕರಣೆಯ ಕೆತ್ತನೆಯನ್ನು ಖಂಡರಿಸಲಾಗಿದೆ. ಎರಡನೆ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ಏಳು ಜನ ವ್ಯಕ್ತಿಗಳನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಸ್ವರ್ಗ ಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಒಂದು ಅಡಿ ಎತ್ತರದ ಶಿವಲಿಂಗ ಮತ್ತು ನಂದಿಯನ್ನು ಚಿತ್ರಿಸಲಾಗಿದೆ ಇದರ ಬಲಭಾಗದಲ್ಲಿ ಯತಿಯು ಈ ಶಿವಲಿಂಗಕ್ಕೆ ಪೂಜಾ ಕೈಂಕರ್ಯವನ್ನು ನೆರವೇರಿಸುತ್ತಿರುವ ದೃಶ್ಯ, ಈತನ ಹಿಂಭಾಗದಲ್ಲಿ ಕೈಮುಗಿದು ಕುಳಿತಿರುವ ಇಬ್ಬರು ಭಕ್ತರು ಹಾಗೂ ಶಿವಲಿಂಗದ ಎಡಭಾಗದಲ್ಲಿರುವ ನಂದಿಯ ಪಕ್ಕದಲ್ಲಿ ಇಬ್ಬರು ಭಕ್ತರು ಕೈಮುಗಿದು ಕುಳಿತಿರುವುದು ಕಂಡುಬರುತ್ತದೆ. ಜೊತೆಗೆ ಇದರ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಉಬ್ಬು ಶಿಲ್ಪಗಳ ಕೆತ್ತನೆಯನ್ನು ಕಾಣಬಹುದು.

7. **ವೀರಗಲ್ಲು**:

ಇದು ಸುಮಾರು 3 ಅಡಿ ಎತ್ತರ ಮತ್ತು 2 ಅಡಿ ಅಗಲ ಮತ್ತು 6 ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರ ಪುರುಷರಿದ್ದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಬಿಲ್ಲು, ಬಾಣ, ಈಟಿ ಮತ್ತು ಭರ್ಜಿಯನ್ನು ಹಿಡಿದು ಹೋರಾಡುತ್ತಿರುವ ದೃಶ್ಯ ಈತನ ಹಿಂಭಾಗದಲ್ಲಿ ಎರಡು ಗೋವುಗಳು ನಿಂತಿರುವುದು ಕಂಡುಬರುತ್ತದೆ. ಎರಡನೇ ಪಟ್ಟಿಕೆಯಲ್ಲಿ ಚಾಮರಧಾರಿಣಿ ದೇವ ಕನ್ಯೆಯರು ಯುದ್ಧದಲ್ಲಿ ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲೂ ಸಹ ಚಾಮರಧಾರಿಣಿ ದೇವ ಕನ್ಯೆಯರು ಯುದ್ಧದಲ್ಲಿ ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ.

**೮. ರಾವಳೇಶ್ವರ ಶಿಲ್ಪ**

ಈ ಶಿಲ್ಪವು ಶೈವ ಪರಂಪರೆಗೆ ಪೂರಕವಾಗಿದ್ದು ಈ ರೀತಿಯ ಶಿಲ್ಪಗಳು ಮಹಿಷ ಮಂಡಲ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ಇದನ್ನು ಕೆಲವರು ರಾವಣಶಿಲ್ಪ, ರಾವಳೇಶ್ವರ ಶಿಲ್ಪ ಎಂದು ಕರೆಯುವ ವಾಡಿಕೆ ಇದೆ, ಈ ರೀತಿಯ ಶಿಲ್ಪಗಳು ಚಾಮರಾಜನಗರ ಜಿಲ್ಲೆಯಾದ್ಯಂತ ಹಲವು ಕಡೆ ಕಂಡುಬರುತ್ತವೆ. ಈ ಶಿಲ್ಪವು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು, 2 ಅಡಿ ಎತ್ತರ, 2 ಅಡಿ ಅಗಲ ಮತ್ತು 3 ಇಂಚು ದಪ್ಪನಾಗಿದ್ದು ಹತ್ತು ತಲೆಯನ್ನು ಹೊಂದಿದ್ದು ದಶ ಭುಜಾಕೃತಿಯನ್ನು ಹೊಂದಿದೆ ಇಪ್ಪತ್ತು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದು ಅವುಗಳಲ್ಲಿ ತ್ರಿಶೂಲ, ಖಡ್ಗ ಮತ್ತು ಬಿಲ್ಲು ಬಾಣಗಳನ್ನು ಹಿಡಿದಿರುವುದು ಮತ್ತು ಮತ್ತೊಂದು ಕೈಯನ್ನು ಕೆಳಕ್ಕೆ ಇಳಬಿಟ್ಟಿರುವುದು ಕಂಡು ಬರುತ್ತದೆ. ಕೂರಳಲ್ಲಿ(ಕಂಠ) ರುದ್ರಮಾಲೆ (ರುದ್ರಾಕ್ಷಿಮಣಿ)ಹಾಕಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತಿದ್ದು ಸೊಂಟದ ಕೆಳಗೆ ವಸ್ತ್ರವನ್ನು ಧರಿಸಿದ್ದು ಸುಂದರವಾದ ನೆರಿಗೆಗಳಿಂದ ವಸ್ತ್ರವು ಕೂಡಿದ್ದು ಎರಡೂ ಕಾಲುಗಳಲ್ಲಿ ಕಾಲು ಬಂದಿಯನ್ನು ಧರಿಸಿದ್ದಾನೆ. ಈ ಎಲ್ಲಾ ಲಕ್ಷಣಗಳನ್ನು ಗಮನಿಸಿದಾಗ ಈ ಶಿಲ್ಪವು ರಾಜನ ಎಲ್ಲಾ ಲಕ್ಷಣಗಳನ್ನು ಹೊಂದಿರುವುದರಿಂದ ರಾವಳೇಶ್ವರ ಪ್ರತ್ಯಕ್ಷದೇವ (ರಾಜ) ಎಂದು ಈ ಭಾಗದಲ್ಲಿ ಕರೆಯುವ ಪ್ರತೀತಿಯಿದ್ದು ಇದನ್ನು ದೇವರೆಂದು ಪೂಜಿಸುತ್ತಿದ್ದಾರೆ.

**೯. ವೀರಗಲ್ಲು**

ಈ ವೀರಗಲ್ಲು ಸುಮಾರು 5 ಅಡಿ ಎತ್ತರ, 4 ಅಡಿ ಅಗಲವಿದ್ದು 5 ಇಂಚು ದಪ್ಪದಾಗಿದ್ದು, ಗ್ರಾನೈಟ್ ಶಿಲೆಯದ್ದಾಗಿದ್ದು, ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ ಒಂದನೇ ಪಟ್ಟಿಕೆಯಲ್ಲಿ 6 ಜನ ವೀರ ಯೋಧರು ಬಿಲ್ಲು, ಬಾಣ, ಕತ್ತಿ ಗುರಾಣಿಗಳನ್ನು ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ಎರಡನೆ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ಐದು ಜನ ವ್ಯಕ್ತಿಗಳನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಸ್ವರ್ಗ ಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಒಂದು ಅಡಿ ಎತ್ತರದ ಶಿವಲಿಂಗವಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖವುಳ್ಳ ಪ್ರಭಾವಳಿ ಇದ್ದು, ಈ ಪ್ರಭಾವಳಿಯ ಮೇಲ್ಭಾಗದಲ್ಲಿ ಬಾಗಿದ ಕಮಲದ ರೀತಿಯ ಬಳ್ಳಿ ಸುರುಳಿಗಳನ್ನು ತುಂಬಾ ಅಲಂಕೃತವಾಗಿ ಚಿತ್ರಿಸಲಾಗಿದೆ. ಇದರ ಬಲಭಾಗದಲ್ಲಿ ಯತಿಯು ಈ ಶಿವಲಿಂಗಕ್ಕೆ ಪೂಜಾ ಕೈಂಕರ್ಯವನ್ನು ನೆರವೇರಿಸುತ್ತಿರುವ ದೃಶ್ಯ ಯತಿಯ ಹಿಂಭಾಗದಲ್ಲಿ ವೀರನು ಧ್ಯಾನಸಕ್ತನಾಗಿ ಕುಳಿತಿರುವುದನ್ನು ಕಾಣಬಹುದಾಗಿದೆ. ಶಿವಲಿಂಗದ ಎಡಭಾಗದಲ್ಲಿ ನಂದಿಯ ಶಿಲ್ಪವಿದ್ದು, ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ.

## ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು


1.ವೀರಗಲ್ಲು


2. ಇಕ್ಕೈ ಮಾಸ್ತಿಕಲ್ಲು


3.ವೀರಗಲ್ಲು


4.ಸ್ಮಾರಕ ಶಿಲ್ಪ


5.ವೀರಗಲ್ಲು


6.ವೀರಗಲ್ಲು


7. ವೀರಗಲ್ಲು


8. ರಾವಳೇಶ್ವರ ಶಿಲ್ಪ


9. ವೀರಗಲ್ಲು

## ಪರಾಮರ್ಶನ ಗ್ರಂಥಗಳು

1. ಸೂರ್ಯನಾಥ ಕಾಮತ್ ಯು (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–1, ಕರ್ನಾಟಕ ಸರ್ಕಾರ, ಬೆಂಗಳೂರು–1984
2. ಶೇಷಶಾಸ್ತ್ರಿ, ಆರ್– ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2010.
3. ತಿಪ್ಪೆರುದ್ರಸ್ವಾಮಿ, ಹೆಚ್– ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು–2010
4. ಪರಶಿವಮೂರ್ತಿ. ಡಿ.ವಿ– ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–1999.
5. ಚಿದಾನಂದಮೂರ್ತಿ,ಎಂ– ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು–2002
6. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2005
7. ಪೋಟೋದಲ್ಲಿನ ಚಿತ್ರವನ್ನು ಗಮನಿಸಿ, ಚಿತ್ರ ಸಂಖ್ಯೆ–1 ರಿಂದ 10.